<u>ಕರ್ನಾಟಕ ಲೋಕಾಯುಕ್ತ</u>

**ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್./1755/2021**
**ಪಿ.ಓ.ಎ.ಆರ್.ಇ–06 (ಮಂಡನಾಧಿಕಾರಿಯವರ ಶಾಖೆ.)**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 09/02/2022.

74

**<u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>**

**ವಿಷಯ:** (1) **ಶ್ರೀ. ಸಿ.ಪಿ.ಯೋಗೇಶ್ ಬಿನ್ ಲೇಟ್ ಪುಟ್ಟೇಗೌಡ,** ಗುಂಡ್ಲುಪೇಟೆ ವಾಣಿಜ್ಯ ತೆರಿಗೆ ಅಧಿಕಾರಿ, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆ, (2) **ಶ್ರೀಮತಿ. ರತ್ನ ರಾಜಪ್ಪ ಕೋಂ ರಾಜಪ್ಪ,** ಗುಂಡ್ಲುಪೇಟೆ ವಾಣಿಜ್ಯ ತೆರಿಗೆ ಪರಿವೀಕ್ಷಕರು, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆ, (3) **ಶ್ರೀ. ಕೆ.ಎಂ.ಶಿವಕುಮಾರ್ ಬಿನ್ ಲೇಟ್ ಕೆ.ಸಿ.ಮಲ್ಲಣ್ಣ,** ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆ, (4) **ಶ್ರೀ. ಮಹದೇವು ಬಿನ್ ಲೇಟ್ ಕರಿಯಯ್ಯ,** ಡಿ ದರ್ಜೆ ನೌಕರರು, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆರವರುಗಳು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

******

1) ಚಾಮರಾಜನಗರ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆಯ ಪೋಲಿಸ್ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) **ಸಿ.ಪಿ.ಯೋಗೇಶ್ ಬಿನ್ ಲೇಟ್ ಪುಟ್ಟೇಗೌಡ,** ಗುಂಡ್ಲುಪೇಟೆ ವಾಣಿಜ್ಯ ತೆರಿಗೆ ಅಧಿಕಾರಿ, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆ, (2) **ಶ್ರೀಮತಿ. ರತ್ನ ರಾಜಪ್ಪ ಕೋಂ ರಾಜಪ್ಪ, ಗುಂಡ್ಲುಪೇಟೆ ವಾಣಿಜ್ಯ ತೆರಿಗೆ ಪರಿವೀಕ್ಷಕರು, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆ,** (3) **ಶ್ರೀ. ಕೆ.ಎಂ.ಶಿವಕುಮಾರ್ ಬಿನ್ ಲೇಟ್** ಕೆ.ಸಿ.ಮಲ್ಲಣ್ಣ, ದ್ವಿತೀಯ ದರ್ಜೆ ಸಹಾಯಕರು, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆ, (4) **ಶ್ರೀ. ಮಹದೇವು ಬಿನ್ ಲೇಟ್ ಕರಿಯಯ್ಯ,** **'ಡಿ'** ದರ್ಜೆ ನೌಕರರು, ವಾಣಿಜ್ಯ ತೆರಿಗೆ ಇಲಾಖೆ, ಗುಂಡ್ಲುಪೇಟೆ (ಇನ್ನು ಮುಂದೆ ಕ್ರಮವಾಗಿ 1, 2, 3 ಮತ್ತು 4ನೇ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಜಿ.ಎನ್.ಶ್ರೀಕಾಂತ್,** ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ, ಚಾಮರಾಜನಗರ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರಿಗೆ ಎದುರುದಾರರು ಅಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಗುಂಡ್ಲುಪೇಟೆ ಮಾರಾಟ ತೆರಿಗೆ ಚೆಕ್‌ಪೋಸ್ಟ್ ಮೇಲೆ ದಾಳಿ ಮಾಡಿದಾಗ, ಸದರಿ ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎದುರುದಾರರುಗಳ ಬಳಿ ನಗದು ವಹಿ ಪುಸ್ತಕದಲ್ಲಿ ಘೋಷಿಸಿದ ಹಣಕ್ಕಿಂತ ಹೆಚ್ಚುವರಿ ಹಣ ದೊರೆತಿದ್ದು, ಆ ಬಗ್ಗೆ ಸರಿಯಾದ ಸಮಜಾಯಿಷಿ ನೀಡದೆ ಇದ್ದುದರಿಂದ, ಹೆಚ್ಚಿನ ಹಣವನ್ನು ಚೆಕ್‌ಪೋಸ್ಟ್‌ನಲ್ಲಿ ಹಾದುಹೋಗುವ ವಾಹನಗಳ ಮಾಲೀಕರು / ಚಾಲಕರುರವರುಗಳಿಂದ ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

## 2) ಪ್ರಕರಣದ ಸಂಕ್ಷಿಪ್ತ ಸಾರಾಂಶ:-

i. ಚಾಮರಾಜನಗರ ಜಿಲ್ಲೆಯ ಪುಣಜನೂರು ಮತ್ತು ಗುಂಡ್ಲುಪೇಟೆ ತಾಲೂಕಿನ ಗುಂಡ್ಲುಪೇಟೆ ಪಟ್ಟಣದಲ್ಲಿರುವ ವಾಣಿಜ್ಯ ತೆರಿಗೆ ಇಲಾಖೆಗೆ ಸೇರಿರುವ ಮಾರಾಟ ತೆರಿಗೆ ಚೆಕ್‌ಪೋಸ್ಟ್‌ನಲ್ಲಿ ದಿನ ನಿತ್ಯ ರಾಜ್ಯದಿಂದ ಮತ್ತು ಹೊರರಾಜ್ಯಗಳಿಂದ ಬರುವ ವಾಹನಗಳನ್ನು ಪರಿಶೀಲನೆ ನಡೆಸುವ ಉದ್ದೇಶದಿಂದ ಚೆಕ್‌ಪೋಸ್ಟ್‌ನಲ್ಲಿ ಸರ್ಕಾರಿ ಕೆಲಸಗಳಲ್ಲಿ ನಿಯಮಾವಳಿಗೆ ವಿರುದ್ಧವಾಗಿ ಹಾಗೂ ಕಾನೂನು ಬಾಹಿರವಾಗಿ ಅಲ್ಲಿ ದಿನ ನಿತ್ಯ ಕರ್ತವ್ಯ ನಿರ್ವಹಿಸುವ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಮಧ್ಯವರ್ತಿಗಳು ಅಕ್ರಮವಾಗಿ ಹಣ ವಸೂಲಿ ಮಾಡುತ್ತಾ ತೊಂದರೆ ನೀಡುತ್ತಿದ್ದಾರೆಂದು ನೊಂದ ಮಾಲೀಕರು / ಚಾಲಕರುಗಳು, ಸಾರ್ವಜನಿಕರು ಚಾಮರಾಜನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರಿಗೆ ಮನವಿ ಸಲ್ಲಿಸಿದ ಮೇರೆಗೆ ಅವರು **ಶ್ರೀ. ಜಿ.ಎನ್.ಶ್ರೀಕಾಂತ್, ಪೊಲೀಸ್ ನಿರೀಕ್ಷಕರು, ಚಾಮರಾಜನಗರ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣಾಧಿಕಾರಿಗೆ** ವಿಚಾರಣೆ ನಡೆಸಿ ವರದಿ ನೀಡುವಂತೆ ಆದೇಶಿಸಿರುತ್ತಾರೆ. ಸದರಿ ಆದೇಶದ ಮೇರೆಗೆ ಪೊಲೀಸ್ ನಿರೀಕ್ಷಕರವರು ಸದರಿ ಚೆಕ್‌ಪೋಸ್ಟ್ ಬಳಿ ಹೋಗಿ ಬಾತ್ಮಿದಾರರಿಂದ ಮಾಹಿತಿ ಸಂಗ್ರಹಿಸಲಾಗಿ, ಸದರಿ ಚೆಕ್‌ಪೋಸ್ಟ್‌ನಲ್ಲಿ ವಾಣಿಜ್ಯ ತೆರಿಗೆ ಇಲಾಖೆಗೆ ಸೇರಿದ ಅಧಿಕಾರಿ, ಸಿಬ್ಬಂದಿಗಳು ಮತ್ತು ಮಧ್ಯವರ್ತಿಗಳು ದಿನನಿತ್ಯ ಸರದಿಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು ಚೆಕ್‌ಪೋಸ್ಟ್‌ನ ನಿಯಮಗಳನ್ನು ಮೀರಿ ಕಾನೂನು ಬಾಹಿರವಾಗಿ ಹಾಗೂ ಅಕ್ರಮವಾಗಿ ಹಣ ಸಂಗ್ರಹಣೆ ಮಾಡುತ್ತಿರುವುದು ಕಂಡುಬಂದಿದೆ ಎಂದು ವರದಿಯನ್ನು ಆರಕ್ಷಕ ಉಪಾಧೀಕ್ಷಕರಿಗೆ ದಿ: 07/03/2017 ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಆಧರಿಸಿ, ಆರಕ್ಷಕ ಉಪಾಧೀಕ್ಷಕರು ಠಾಣೆಯ ಗುನ್ನೆ ನಂ.02/2017 ರಲ್ಲಿ ಕಲಂ 7, 13(1) (ಡಿ) (ಇ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ಎದುರುದಾರರುಗಳ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ.

ii. ದಿನಾಂಕ 09/03/2017 ರಂದು ಪೊಲೀಸ್ ಉಪಾಧೀಕ್ಷಕರು ಇಬ್ಬರು ಪಂಚರಾದ ಸಿ.ವೇಲುಕುಮಾರ್ ಮತ್ತು ಶ್ರೀಮತಿ ಎಂ.ಲಲಿತಾ ಇವರುಗಳನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ, ಅವರು ಪಂಚರಾಗಿ ಸಹಕರಿಸಲು ಒಪ್ಪಿದ ನಂತರ, ತನಿಖಾಧಿಕಾರಿ, ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಗುಂಡ್ಲುಪೇಟೆ ಪಟ್ಟಣದ ಮೈಸೂರು-ಊಟಿ ರಸ್ತೆಯ ವಾಣಿಜ್ಯ ತೆರಿಗೆ ಇಲಾಖೆಗೆ ಸೇರಿರುವ ಚೆಕ್‌ಪೋಸ್ಟ್‌ನ್ನು

ಶೋಧನೆಮಾಡಲು ಸರ್ಚ್ ವಾರಂಟನ್ನು ಪಡೆದು, ಬೆಳಿಗ್ಗೆ 7 ಗಂಟೆಗೆ ಚೆಕ್‌ಪೋಸ್ಟ್ ಬಳಿ ಹೋಗಿ ಗಮನಿಸುತ್ತಿದ್ದಾಗ, ಸರಕು ವಾಹನಗಳ ಚಾಲಕರು ಮತ್ತು ಮಾಲೀಕರು ಅವರುಗಳ ದಾಖಲಾತಿಗಳನ್ನು ಪರಿಶೀಲನೆಗೆ ನೀಡಿ, ಜೊತೆಯಲ್ಲಿ ಹಣವನ್ನು ನೀಡುತಿರುವುದನ್ನು ಗಮನಿಸಿ, ಚೆಕ್‌ಪೋಸ್ಟ್ ಮೇಲೆ ದಾಳಿ ಮಾಡಿದಾಗ, ಅಲ್ಲಿ 1, 2, 3 ಮತ್ತು 4ನೇ ಎದುರುದಾರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ತನಿಖಾಧಿಕಾರಿಯು ಅವರಿಗೆ ಶೋಧನಾ ವಾರಂಟನ್ನು ತೋರಿಸಿ, ಚೆಕ್‌ಪೋಸ್ಟ್‌ನ್ನು ಶೋಧನೆ ಮಾಡಲು ಪ್ರಾರಂಭಿಸಿದ್ದು, ಮೊದಲು ಎದುರುದಾರರುಗಳಾದ 1, 2, 3 ಮತ್ತು 4 ರವರುಗಳ ಅಂಗ ಶೋಧನೆ ಮಾಡಿದಾಗ 1ನೇ ಎದುರುದಾರರ ಶರ್ಟಿನ ಜೇಬಿನಲ್ಲಿ 690/- ರೂ.ಗಳಿದ್ದು, 2ನೇ ಎದುರುದಾರರ ಬಳಿ 890/- ರೂ. ಗಳಿದ್ದು, 3ನೇ ಎದುರುದಾರರ ಬಳಿ 260/- ರೂ. ಗಳಿದ್ದು, ಆ ಹಣವು ಎದುರುದಾರರು ಅವರ ಸ್ವಂತ ಹಣವೆಂದು ಮತ್ತು ದಿನನಿತ್ಯ ಖರ್ಚಿಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. 4ನೇ ಎದುರುದಾರರ ಬಳಿ 210 ರೂ. ಗಳು ದೊರೆತಿದ್ದು ಮತ್ತು ಆ ಹಣದ ಜೊತೆಗೆ ಒಂದು ಕವರಿದ್ದು, "ಈ ಕವರನ್ನು ನಮ್ಮ ಸಿ.ಟಿ.ಓ. ರವರಾದ ಶ್ರೀ. ಸಿ.ಪಿ.ಯೋಗೇಶ್‌ರವರು ನನ್ನ ಬಳಿ ಇಟ್ಟಿರು ಎಂದು ತಿಳಿಸಿ, ನನಗೆ ನೀಡಿದ್ದಾರೆಂದು" 4ನೇ ಎದುರುದಾರರು ತಿಳಿಸಿದ ಮೇರೆಗೆ ಆ ಕವರಿನಲ್ಲಿ 3,500/- ರೂ.ಗಳಿದ್ದು ಅದನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಚೆಕ್‌ಪೋಸ್ಟ್‌ನ್ನು ಶೋಧನೆ ಮಾಡಿದಾಗ 3ನೇ ಎದುರುದಾರರ ಟೇಬಲ್‌ನಲ್ಲಿ ಕೆಲವು ದಾಖಲಾತಿಗಳು ಇದ್ದು, 1,830/- ರೂ. ಹಣ ಕೂಡ ಇದ್ದು, ಆ ಹಣದ ಬಗ್ಗೆ ತನಿಖಾಧಿಕಾರಿ ವಿಚಾರಿಸಲಾಗಿ, 3ನೇ ಎದುರುದಾರರು ಸದರಿ ಹಣ ಅವರ ಸ್ವಂತ ಹಣವೆಂದು ತಿಳಿಸಿರುತ್ತಾರೆ. ಅದನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದು, ಶೋಧನೆಯನ್ನು ಮುಂದುವರಿಸಿದ್ದು, ಸದರಿ ಕಛೇರಿಯ ಹಾಲ್‌ನಲ್ಲಿ 3 ಅಲ್ಮೇರಾಗಳು, 3 ಟೇಬಲ್‌ಗಳು ಮತ್ತು 1 ರ್‍ಯಾಕ್ ಇದ್ದು, 2ನೇ ಎದುರುದಾರರು ಕರ್ತವ್ಯ ನಿರ್ವಹಿಸುವ ಟೇಬಲ್‌ನ ಒಳಗಡೆ 2,000/- ರೂ.ಗಳ 12 ನೋಟುಗಳಿದ್ದು ಒಟ್ಟು 24,000/- ರೂ. ಗಳ ಬಗ್ಗೆ ತನಿಖಾಧಿಕಾರಿಯವರು 2ನೇ ಎದುರುದಾರರನ್ನು ವಿಚಾರಿಸಿದಾಗ, ಅವರು ದಂಡ ವಿಧಿಸಿದ ಹಣವೆಂದು ತಿಳಿಸಿರುತ್ತಾರೆ. ನಂತರ ಹಾಲ್ ಮಧ್ಯಭಾಗದಲ್ಲಿ ಒಂದು ವಿಶ್ರಾಂತಿ ಕೊಠಡಿ ಇದ್ದು, ಅಲ್ಲಿ ಇದ್ದ ಏರ್‌ಬ್ಯಾಗ್ 3ನೇ ಎದುರುದಾರ ತನಗೆ ಸೇರಿದ್ದೆಂದು ತನಿಖಾಧಿಕಾರಿಯವರಿಗೆ ತಿಳಿಸಿದ ಮೇರೆಗೆ ಆ ಬ್ಯಾಗನ್ನು ಪರಿಶೀಲಿಸಲಾಗಿ ಅದರಲ್ಲಿ 575/- ರೂ.ಗಳಿದ್ದು, ಅದನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ಅಲ್ಲಿಯೇ ಪಕ್ಕದಲ್ಲಿ ಇನ್ನೊಂದು ರೂಂ ಇದ್ದು, ಅದನ್ನು 1ನೇ ಎದುರುದಾರರು ಉಪಯೋಗಿಸುತ್ತಿರುವುದಾಗಿ ತನಿಖಾಧಿಕಾರಿಯವರಿಗೆ ತಿಳಿಸಿದ ಮೇರೆಗೆ ಆ ರೂಂನ್ನು ಪರಿಶೀಲಿಸಲಾಗಿ ಅಲ್ಲಿನ ಕಾಟ್ ಮೇಲೆ ಚಿಕ್ಕ ಬ್ಯಾಗಿದ್ದು, ಅದರಲ್ಲಿ

1,780/- ರೂ. ಹಣ ಮತ್ತು ನ್ಯೂಸ್ ಪೇಪರ್ ನಿಂದ ಮಾಡಿದ 13 ಕವರ್‌ಗಳಿದ್ದು, ಪ್ರತಿಯೊಂದು ಕವರುಗಳನ್ನು ಎಲ್ಲರ ಸಮಕ್ಷಮ ತೆರೆದು ನೋಡಲಾಗಿ 1ನೇ ಕವರಿನಲ್ಲಿ 4,000/-, 2ನೇ ಕವರಿನಲ್ಲಿ 4,200/-, 3ನೇ ಕವರಿನಲ್ಲಿ 2,400/-, 4ನೇ ಕವರಿನಲ್ಲಿ 2,200/-, 5ನೇ ಕವರಿನಲ್ಲಿ 2,000/-, 6ನೇ ಕವರಿನಲ್ಲಿ 2,300/- , 7ನೇ ಕವರಿನಲ್ಲಿ 3,500/-, 8ನೇ ಕವರಿನಲ್ಲಿ 1,500/-, 9ನೇ ಕವರಿನಲ್ಲಿ 3,500/-, 10ನೇ ಕವರಿನಲ್ಲಿ 2,930/-, 11ನೇ ಕವರಿನಲ್ಲಿ 5,500/-, 12ನೇ ಕವರಿನಲ್ಲಿ 3,500/- ಮತ್ತು 13ನೇ ಕವರಿನಲ್ಲಿ 2,200/- ರೂ.ಗಳಿದ್ದು, ಬ್ಯಾಗ್ ನಲ್ಲಿ ದೊರೆತ ಹಣವನ್ನು ಮತ್ತು 13 ಕವರ್‌ಗಳಲ್ಲಿ ದೊರೆತ ಹಣವನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

iii. ಚೆಕ್‌ಪೋಸ್ಟ್‌ನಲ್ಲಿ ದೊರೆತ ಹಣದ ಬಗ್ಗೆ ತನಿಖಾಧಿಕಾರಿಯವರು 1, 2, 3 ಮತ್ತು 4ನೇ ಎದುರುದಾರರನ್ನು ವಿಚಾರಿಸಿದಾಗ, ಅವರು ಸಮಜಾಯಿಷಿಗಳನ್ನು ಬರೆದುಕೊಟ್ಟಿರುತ್ತಾರೆ. 1ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ "ನಾನು ಮತ್ತು ತನಿಖಾ ಠಾಣೆಯ ಸಿಬ್ಬಂದಿಯವರು ದಿ: 08/03/2017ರಂದು ಬೆಳಿಗ್ಗೆ 10 ಗಂಟೆಯಿಂದ ತನಿಖಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿ: 09/03/2017ರಂದು ಬೆಳಿಗ್ಗೆ ಸುಮಾರು 7 ಗಂಟೆ ಸಮಯದಲ್ಲಿ ತನಿಖಾ ಠಾಣೆಯನ್ನು ಸರ್ಚ್ ಮಾಡುವುದಾಗಿ ತಿಳಿಸಿ, ಸರ್ಚ್ ಮಾಡಲು ಪ್ರಾರಂಭಿಸಿರುತ್ತೀರಿ. ತನಿಖಾ ಠಾಣೆಯಲ್ಲಿರುವ ರೂಂಗಳು, ಅಲ್ಮೇರಾಗಳು ಮತ್ತು ಬ್ಯಾಗ್‌ಗಳು ಹಾಗೂ ನಮ್ಮನ್ನು ಸರ್ಚ್‌ಗೆ ಒಳಪಡಿಸಿರುತ್ತೀರಿ. ನನ್ನ ಪ್ಯಾಕೇಟ್‌ನಲ್ಲಿರುವುದು ನನ್ನ ಸ್ವಂತ ಹಣವಾಗಿದ್ದು, ಅದನ್ನು ನಗದು ವಹಿಯಲ್ಲಿ ನಮೂದಿಸಿರುತ್ತೇನೆ. ನಗದು ವಹಿಯಲ್ಲಿ 3,720/- ರೂ.ಗಳನ್ನು ನಮೂದಿಸಿದ್ದು, ತನಿಖಾ ಠಾಣೆಯಲ್ಲಿ ದಂಡದ ಮೊತ್ತವನ್ನು ಸಂಗ್ರಹಿಸುವಾಗ, ರೂ. 3,000/- ರಶೀದಿಗೆ ಕಡಿಮೆ ಇರುವುದಾಗಿ ತಿಳಿಸಿದ ಪ್ರಯುಕ್ತ ನನ್ನ ಜೇಬಿನಲ್ಲಿದ್ದ 3,000/- ರೂ. ಗಳನ್ನು ರಶೀದಿಗೆ ನೀಡಿರುತ್ತೇನೆ. ಆ ಕಾರಣ, ನನ್ನ ಜೇಬನ್ನು ಸರ್ಚ್ ಮಾಡಿದಾಗ 720/- ರೂ. ಮಾತ್ರ ಇರುವುದನ್ನು ತಾವು ಗಮನಿಸಿರುತ್ತೀರಿ, ಇನ್ನು ಯಾವುದೇ ಹಣ ಅಂದರೆ ರಶೀದಿ ಹಣ ರೂ. 24,000/- ಬಿಟ್ಟು ಯಾವುದೇ ಹಣ ನನಗೆ ಸಂಬಂಧಿಸಿರುವುದಿಲ್ಲವೆಂದು" ಬರೆದುಕೊಟ್ಟಿರುತ್ತಾರೆ.

2ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ "ನಾನು ಕಚೇರಿಗೆ ತಡವಾಗಿ ಬಂದಿರುತ್ತೇನೆ. ನಾನು ಹೃದ್ರೋಗಿಯಾಗಿದ್ದು, ಆಸ್ಪತ್ರೆಯಲ್ಲಿ ದೈನಂದಿನ ಔಷಧವನ್ನು ತೆಗೆದುಕೊಂಡು ಬಂದಿರುತ್ತೇನೆ. ನಾನು ಬಂದಾಗ ದೈನಂದಿನ ಕೆಲಸಕಾರ್ಯಗಳು ಸಾಗುತ್ತಿದ್ದು, ನಂತರ ಎ.ಸಿ.ಬಿ. ಅಧಿಕಾರಿಗಳು ಕಚೇರಿಗೆ ಭೇಟಿ ಇಟ್ಟಿರುತ್ತಾರೆ. ನನ್ನ ಬಳಿ ಯಾವುದೇ ಹಣವಿರುವುದಿಲ್ಲ ಹಾಗೂ ಎ.ಸಿ.ಬಿ.

ಅಧಿಕಾರಿಗಳು ವಶಪಡಿಸಿಕೊಂಡಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು" ಬರೆದುಕೊಟ್ಟಿರುತ್ತಾರೆ.

3ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ "ನಾನು ದಿ:09/03/2017ರಂದು ವಾಣಿಜ್ಯ ತನಿಖಾ ಠಾಣೆಯಲ್ಲಿ ಬೆಳಿಗ್ಗೆ 7.30ಕ್ಕೆ ಕರ್ತವ್ಯ ನಿರ್ವಹಿಸುತ್ತಿದ್ದೆ. ಈ ಸಮಯದಲ್ಲಿ ಎ.ಸಿ.ಬಿ. ಅಧಿಕಾರಿಗಳು ತನಿಖಾ ಠಾಣೆಗೆ ಭೇಟಿ ನೀಡಿರುವುದು ಹಾಗೂ ತಪಾಸಣೆ ಮಾಡಿದರು ಎಂದು ಹೇಳಲಿಚ್ಛಿಸುತ್ತೇನೆ ಎಂದು" ಬರೆದುಕೊಟ್ಟಿರುತ್ತಾರೆ.

4ನೇ ಎದುರುದಾರರು ಅವರ ಸಮಜಾಯಿಷಿಯಲ್ಲಿ "ನಾನು ದಿ: 09/03/2017ರಂದು ವಾಣಿಜ್ಯ ತನಿಖಾ ಠಾಣೆಯಲ್ಲಿ ಬೆಳಿಗ್ಗೆ 7.30ಕ್ಕೆ ಕರ್ತವ್ಯ ನಿರ್ವಹಿಸುತ್ತಿರುವಾಗ ಎ.ಸಿ.ಬಿ. ಅಧಿಕಾರಿಗಳು ತನಿಖಾ ಠಾಣೆಗೆ ಭೇಟಿ ನೀಡಿದರು ಹಾಗೂ ತಪಾಸಣೆ ಮಾಡಿದರು ಎಂದು ತಿಳಿಸಬಯಸುತ್ತೇನೆ ಎಂದು" ಬರೆದುಕೊಟ್ಟಿರುತ್ತಾರೆ.

ತನಿಖಾಧಿಕಾರಿಯವರು ಪಂಚರ ಸಮಕ್ಷಮ ತನಿಖಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಟೇಬಲ್ ಮತ್ತು ಬ್ಯಾಗ್‌ಗಳಲ್ಲಿ ಹಣ ದೊರೆತಿದ್ದು, ಸದರಿ ಹಣವನ್ನು ಅವರುಗಳು ಕವರ್‌ಗಳಲ್ಲಿ ಹಾಕಿ ಪ್ರತ್ಯೇಕವಾಗಿ ಇಟ್ಟಿರುತ್ತಾರೆ. ಸದರಿ ಹಣವು ಅವರ ಸ್ವಂತ ಹಣವಾಗಿರುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ತನಿಖಾ ಠಾಣೆಯಲ್ಲಿದ್ದ ದಾಖಲೆಗಳಾದ ಇನ್‌ವಾರ್ಡ್, ಔಟ್‌ವಾರ್ಡ್, ನಗದು ವಹಿ, ಕರ್ತವ್ಯ ಪ್ರಭಾರ ವಹಿಸಿಕೊಡುವ ವಹಿ, ರಶೀದಿ ಪುಸ್ತಕ, ಜಿ.ಸಿ. ಎಂಡಾರ್ಸ್‌ಮೆಂಟ್, ಇ-ಸುಗಮ್ ಮತ್ತು ಹಾಜರಾತಿ ವಹಿಯ ದೃಢೀಕೃತ ಪ್ರತಿಗಳನ್ನು ವಶಪಡಿಸಿಕೊಂಡಿರುತ್ತಾರೆ. 1, 2, 3 ಮತ್ತು 4ನೇ ಎದುರುದಾರರು ಕಚೇರಿ ನಗದು ವಹಿಯಲ್ಲಿ ನಮೂದಿಸಿದ ಮೊತ್ತವನ್ನು ಅವರುಗಳಿಗೆ ಹಿಂದಿರುಗಿಸಿರುತ್ತಾರೆ. ಉಳಿದ ಮೊತ್ತ ಒಟ್ಟು 47,415/- ರೂ.ಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಚೆಕ್‌ಪೋಸ್ಟ್‌ನಲ್ಲಿ ದೊರೆತ ನಗದು ವಹಿಯಲ್ಲಿ ನಮೂದಿಸಿರುವ ಹಣಕ್ಕೂ ಮತ್ತು ಭೌತಿಕವಾಗಿ ದೊರೆತ ಹಣಕ್ಕೂ ಯಾವುದೇ ಹೊಂದಾಣಿಕೆ ಇರುವುದಿಲ್ಲ ಮತ್ತು ಎದುರುದಾರರು ನೀಡಿದ ವಿವರಣೆ ಸಮಂಜಸವಾಗಿರುವುದಿಲ್ಲ. 1ನೇ ಎದುರುದಾರರು ಅವರು ಉಪಯೋಗಿಸುತ್ತಿದ್ದ ರೂಮಿನ ಬ್ಯಾಗಿನಲ್ಲಿದ್ದ ಹಣ ಮತ್ತು 13 ಪೇಪರ್ ಕವರ್‌ಗಳಲ್ಲಿದ್ದ ಹಣದ ಬಗ್ಗೆ ತೃಪ್ತಿಕರವಾದ ಲೆಕ್ಕ ಕೊಡಲು ವಿಫಲರಾಗಿದ್ದು, ಸದರಿ ಹಣವು ವಾಹನಗಳ ಮಾಲೀಕರಿಂದ ಮತ್ತು ಚಾಲಕರಿಂದ ಲಂಚದ ರೂಪದಲ್ಲಿ ಸ್ವೀಕರಿಸಿರುವುದಾಗಿ ಮತ್ತು 4ನೇ ಎದುರುದಾರರ ಬಳಿ ಇಟ್ಟುಕೊಳ್ಳಲು 1ನೇ

ಎದುರುದಾರರು ನೀಡಿದ ಮೊತ್ತ ರೂ.3,500/- ಮತ್ತು 3ನೇ ಎದುರುದಾರರ ಟೇಬಲ್ ಡ್ರಾನಲ್ಲಿ ದೊರೆತ 1,830/- ರೂ.ಗಳು ಹಾಗೂ ಅವರ ಬ್ಯಾಗಿನಲ್ಲಿ ದೊರೆತ 575/- ರೂ.ಗಳು ಹೆಚ್ಚುವರಿ ನಗದು ಹಣವಾಗಿರುವುದು ಕಂಡುಬರುತ್ತದೆ. ಹಣವು ಚೆಕ್‌ಪೋಸ್ಟ್‌ನಲ್ಲಿ ದೊರೆತ ದಾಖಲಾತಿಗಳಲ್ಲಿ ನಮೂದಿಸದೆ ಇರುವಂತಹ ಹಣವಾಗಿದ್ದು, ಆ ಹಣವು ಅನಧಿಕೃತವಾಗಿ, ಅಕ್ರಮವಾಗಿ ಸಂಗ್ರಹ ಮಾಡಿರುವ ಹಣವಾಗಿರುವುದು ಕಂಡುಬರುತ್ತದೆ. ಆ ಕಾರಣ ತನಿಖಾಧಿಕಾರಿಯವರು ಎಲ್ಲರ ಸಮಕ್ಷಮ ಸವಿಸ್ತಾರ ಜಪ್ತಿ ಪಂಚನಾಮೆಯನ್ನು ಪೂರೈಸಿದ ನಂತರ 1, 2, 3 ಮತ್ತು 4ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ ತನಿಖಾ ದಾಖಲೆಗಳನ್ನು, ಎದುರುದಾರರುಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಪ್ರಕರಣಕ್ಕೆ ಸಂಬಂಧಪಟ್ಟ ಇತರೆ ದಾಖಲಾತಿಗಳನ್ನು ಹಾಗೂ ನಕ್ಷೆಯನ್ನು ಮತ್ತು ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರುಗಳ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

iv) ತನಿಖಾಧಿಕಾರಿಗಳು ದಾಳಿ ಮಾಡಿದ ಸಮಯದಲ್ಲಿ ಚೆಕ್‌ಪೋಸ್ಟ್‌ನಲ್ಲಿ ದೊರೆತ ಹಣವು ಸಂಬಂಧಪಟ್ಟ ದಾಖಲಾತಿಗಳಲ್ಲಿ ನಮೂದಿಸದೆ ಇರುವಂತಹ ಹಣವಾಗಿದ್ದು, ಆ ಹಣವು ಅನಧಿಕೃತವಾಗಿ, ಅಕ್ರಮವಾಗಿ ಸಂಗ್ರಹ ಮಾಡಿರುವ ಹಣವಾಗಿರುವುದು ಕಂಡುಬರುತ್ತದೆ. 1, 2, 3 ಮತ್ತು 4ನೇ ಎದುರುದಾರರು ಚೆಕ್‌ಪೋಸ್ಟ್‌ನಲ್ಲಿ ಹಾದುಹೋಗುವ ಸರಕುಸಾಗಾಣಿಕೆ ವಾಹನಗಳ ಮಾಲೀಕರು / ಚಾಲಕರುಗಳಿಂದ ಅಕ್ರಮವಾಗಿ ಹಣ ಸಂಗ್ರಹಿಸುವ ಮೂಲಕ ಕರ್ತವ್ಯದಲ್ಲಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

3) ಎದುರುದಾರರುಗಳಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. 1ನೇ ಎದುರುದಾರರು ದಿ: 02/10/2021ರಂದು, 2ನೇ ಎದುರುದಾರರು ದಿ: 24/09/2021ರಂದು, 3ನೇ ಎದುರುದಾರರು ದಿ: 01/10/2021ರಂದು, 4ನೇ ಎದುರುದಾರರು ದಿ: 30/11/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. 1, 2, 3 ಮತ್ತು 4ನೇ ಎದುರುದಾರರು ಸಲ್ಲಿಸಿದ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

1ನೇ ಎದುರುದಾರರು ಅವರ ಪರಿವೀಕ್ಷಣಾ ಟಿಪ್ಪಣಿಯ ಪ್ಯಾರಾ-8ರಲ್ಲಿ ತನಿಖಾಧಿಕಾರಿಯು ಅವರಿಂದ ವಶಪಡಿಸಿಕೊಂಡ ಹಣವು ಸುಳ್ಳೆಂದು, ಸದರಿ ಕೊಠಡಿಯನ್ನು ಎಲ್ಲಾ ಅಧಿಕಾರಿಗಳು ಉಪಯೋಗಿಸುತ್ತಿದ್ದರೆಂದು, ಅವರ ಕೊಠಡಿಯಲ್ಲಿದ್ದ ಬ್ಯಾಗ್ ತನ್ನದ್ದಲ್ಲವೆಂದು ಮತ್ತು ಯಾವುದೇ ಮೊತ್ತವನ್ನು ಅಮಾನತ್ತು ಪಡಿಸಿಕೊಂಡಿಲ್ಲವೆಂದು ತಿಳಿಸಿರುತ್ತಾರೆ ಮತ್ತು ವ್ಯಕ್ತಿತ್ವವನ್ನು ಹಾಳುಮಾಡುವ

ದುರುದ್ದೇಶದಿಂದ ದಸ್ತಗಿರಿಮಾಡಿರುತ್ತಾರೆಂದು ಮತ್ತು ಜಪ್ತಿ ಪಂಚನಾಮೆ ಸಮಯದಲ್ಲಿ ಸಮಜಾಯಿಷಿಯನ್ನು ಕೊಟ್ಟಿರುವುದಾಗಿ, ಆ ಕಾರಣ, ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

2ನೇ ಎದುರುದಾರರು ಅವರ ಪರಿವೀಕ್ಷಣಾ ಟಿಪ್ಪಣಿಯ ಪ್ಯಾರಾ-4ರಲ್ಲಿ ದಿ: 09/03/2017ರ ಬೆಳಿಗ್ಗೆ 6.30ರ ಸಮಯದಲ್ಲಿ ನನ್ನ ಪತಿಯವರು ಔಷಧಿಯ ಬ್ಯಾಗ್ ತಂದಿದ್ದು, ಅದರಲ್ಲಿ 890/- ರೂ.ಗಳಿದ್ದು, ಅದನ್ನು ನಗದು ವಹಿಯಲ್ಲಿ ನಮೂದಿಸಿರಲಿಲ್ಲವೆಂದು ತಿಳಿಸಿರುತ್ತಾರೆ. ಪ್ಯಾರಾ-9ರಲ್ಲಿ ಅವರು ಹೊಂದಿದ್ದ 890/- ರೂ.ಗಳು ವೈಯುಕ್ತಿಕ ತುರ್ತು ವೆಚ್ಚಕ್ಕಾಗಿ ಇರಿಸಿಕೊಂಡಿದ್ದಾಗಿ, ಆ ಕಾರಣ, ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

3ನೇ ಎದುರುದಾರರು ಅವರ ಪರಿವೀಕ್ಷಣಾ ಟಿಪ್ಪಣಿಯ ಪ್ಯಾರಾ-4ರಲ್ಲಿ ನಗದು ವಹಿಯಲ್ಲಿ ನಮೂದಿಸಿದ ಮೊತ್ತದಷ್ಟೇ ಹಣವನ್ನು ಮಾಲೀಕರಿಂದ ಮತ್ತು ಚಾಲಕರಿಂದ ವಸೂಲಿ ಮಾಡಲಾಗಿತ್ತು. ಹೆಚ್ಚಿನ ಮೊತ್ತವನ್ನು ವಸೂಲಿ ಮಾಡಿರುವುದಿಲ್ಲ. ಪ್ಯಾರಾ-7ರಲ್ಲಿ ಜಪ್ತಿ ಪಂಚನಾಮೆ ಸಮಯದಲ್ಲಿ ಸಮಜಾಯಿಷಿಯನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಪ್ಯಾರಾ-9ರಲ್ಲಿ ತನಿಖಾಧಿಕಾರಿಯು ಕೊಠಡಿಯಲ್ಲಿ ಅಮಾನತ್ತು ಪಡಿಸಿಕೊಂಡ ಹಣವು ನನಗೆ ಮಾತ್ರ ಸೇರಿದ್ದೆಂದು ಹೇಳಿರುವುದು ಸರಿಯಿರುವುದಿಲ್ಲ ಮತ್ತು ತನ್ನ ವ್ಯಕ್ತಿತ್ವವನ್ನು ಹಾಳುಮಾಡುವ ದುರುದ್ದೇಶದಿಂದ ದಸ್ತಗಿರಿ ಮಾಡಿರುವುದಾಗಿ ತಿಳಿಸುತ್ತಾ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

4ನೇ ಎದುರುದಾರರು ಅವರ ಪರಿವೀಕ್ಷಣಾ ಟಿಪ್ಪಣಿಯ ಪ್ಯಾರಾ-3ರಲ್ಲಿ ತನ್ನ ವಶದಲ್ಲಿ 3,500/- ರೂ.ಗಳು ಇರುವುದಾಗಿ ಮತ್ತು ತಾನು ಸಮರ್ಪಕವಾಗಿ ಲೆಕ್ಕ ನೀಡಿಲ್ಲವೆಂದು ಹೇಳಿರುವುದು ಸರಿಯಲ್ಲ, ಜಪ್ತಿ ಪಂಚನಾಮೆ ಸಮಯದಲ್ಲಿ ಸಮಜಾಯಿಷಿ ನೀಡಿರುವುದಾಗಿ ಮತ್ತು ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

1, 2, 3 ಮತ್ತು 4ನೇ ಎದುರುದಾರರು ನೀಡಿದ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಕಾರಣ, ಎದುರುದಾರರುಗಳಿಂದ ವಶಪಡಿಸಿಕೊಂಡ ಹಣದ ಬಗ್ಗೆ ಎದುರುದಾರರುಗಳು ಸಮರ್ಪಕವಾದ ದಾಖಲೆಗಳನ್ನು ಹಾಗೂ ಲೆಕ್ಕವನ್ನು ನೀಡಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಮತ್ತು ಸಮಜಾಯಿಷಿ ಅಂಶಗಳ ಮೇರೆಗೆ ಎದುರುದಾರರುಗಳ ವಿರುದ್ಧ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ

ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರುಗಳು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರುಗಳ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರುಗಳು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಹಾಗೂ 1ನೇ ಎದುರುದಾರರು ದಿನಾಂಕ 31/07/2019ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 214 (2)(ಬಿ)(1) ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಬೇಕೆಂದು ಕೋರಿ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.